ದಿಃ **15-03-2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಭೋಧಿಸಲಾಯಿತು**.**

ಸಾಕ್ಷಿಯು ಮುಂದುವರೆದ ಪಾಟೀಸವಾಲುಃ ಶ್ರೀ ಡಿವಿಸ್ ವಕೀಲರಿಂದಃ

ನಾನು ಸಾಕ್ಷ್ಯ ನುಡಿಯುತ್ತಿರುವುದು ಎಲ್ಲಾ ವಾದಿಗಳ ಪರವಾಗಿ ಹಾಗೂ ನನ್ನ ಪರವಾಗಿ. 1,2 ಮತ್ತು 3 ನೇ ಪ್ರತಿವಾದಿ ಮತ್ತು ನಮ್ಮ ಸಂಬಂಧ ಒಳ್ಳೆಯದು ಇದೆ. ಅವರ ಪರವಾಗಿಯೂ ನಾನು ಸಾಕ್ಷ್ಯ ನೀಡುತ್ತಿರುವುದು. ನನ್ನ ತಾಯಿಗೆ ಷುಗರ್ ಇತ್ತು ಮತ್ತು ನನ್ನ ತಂದೆ ತೀರಿಕೊಂಡ ನಂತರ ಆಕೆಗೆ ಮಾನಸಿಕ ಖಾಯಿಲೆ ಇತ್ತು. ಆದರ್ಶ ಆಸ್ಪತ್ರೆ ಮತ್ತು ಉಡುಪಿಯ ಜಿಲ್ಲಾ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳು ಹೃದಯ ರೋಗಕ್ಕೆ ಸಂಬಂಧಪಟ್ಟ ದಾಖಲೆಗಳು ಎಂದರೆ ಸರಿ. ನನ್ನ ತಾಯಿಗೆ ಮಾನಸಿಕ ಖಾಯಿಲೆ ಎಂದು ಹೇಳುವುದು ನಾನು ಅಂದಾಜಿನಲ್ಲಿ ಎಂದರೆ ಸರಿಯಲ್ಲ, ಅದಕ್ಕೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಉಂಟು. ಬೇರೆ ಬೇರೆ ವೈದ್ಯರ ಬಳಿ ಅವರಿಗೆ ಚಿಕಿತ್ಸೆ ಕೊಡಿಸಿದ್ದೇವೆ, ಆದರೆ ವೈದ್ಯರ ಹೆಸರು ಗೊತ್ತಿಲ್ಲ. ನನ್ನ ತಾಯಿಗೆ ಷುಗರ್ ಬಿಟ್ಟರೆ ಬೇರೆ ಯಾವುದೇ ಖಾಯಿಲೆ ಇರಲಿಲ್ಲ, ಮಾನಸಿಕವಾಗಿ ಸ್ವಸ್ಥವಾಗಿದ್ದರು ಎಂದರೆ ಸರಿಯಲ್ಲ.

ನನ್ನ ತಾಯಿಗೆ ಸೋದರಿಯರಾದ ಜಲಜ,ಜಾನಮ್ಮ ಮತ್ತು ರಘುವೀರ್ ರವರನ್ನು ಕಂಡರೆ ಪ್ರೀತಿ ಎಂದರೆ ಸಾಕ್ಷಿಯು ಅಷ್ಟೇನೂ ಇರಲಿಲ್ಲ, ಕಡಿಮೆ ಇತ್ತು. ನನ್ನ ತಾಯಿ ಮತ್ತು ಆಕೆಯ ಸಹೋದರಿ ಮತ್ತು ಸಹೋದರ ಎಲ್ಲರೂ ವಾಸವಿದ್ದದ್ದು ವ್ಯಾಜ್ಯದ ಆಸ್ತಿಯ ಮನೆಯಲ್ಲಿ ಎಂದರೆ ಸರಿಯಲ್ಲ. ಆಕೆಯ ಮನೆ ಕಾಪುವಿನಲ್ಲಿ ಇದ್ದರು ಎಂದು ನುಡಿಯುತ್ತಾರೆ. ಜಲಜರವರು ಇರುವುದು ವ್ಯಾಜ್ಯದ ಜಾಗದ ಆಸ್ತಿಯಲ್ಲಿ ಎಂದರೆ ಸರಿ. ಅದೇ ಮನೆಯಲ್ಲಿ ನನ್ನ ತಾಯಿಯ ಸಹೋದರ ಮತ್ತು ಸಹೋದರಿಯರು ಹುಟ್ಟಿ ಬೆಳೆದಿದ್ದು ಎಂದರೆ ಸರಿಯಲ್ಲ.

ಈಗ ಸಾಕ್ಷಿಗೆ ವಕೀಲರು ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ನನ್ನ ಫೋಟೋ ಕಂಡುಬರುತ್ತಿದೆ ಎಂದರೆ ಸರಿ. ಉಳಿದ ಫೋಟೋಗಳು ನನ್ನ ಸಹೋದರ ಮತ್ತು ಸಹೋದರಿಯರದ್ದು ಎಂದರೆ ಸರಿ. ಈಗ ನನಗೆ ತೋರಿಸಿದ ಅದರಲ್ಲಿರುವ ಸಹಿಗಳು ನನ್ನದು ಹಾಗೂ ನನ್ನ ಸಹೋದರ ಸಹೋದರಿಯರದ್ದು, ಆದರೆ ಅವುಗಳನ್ನು ಖಾಲಿ ಕಾಗದದ ಮೇಲೆ ಪಡೆದಿರುವುದು ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಯು ಸದ್ರಿ

ದಾಖಲೆಯನ್ನು ಗುರ್ತಿಸಿರುವುದರಿಂದ, ನಿಡಿ.1 ಎಂದು ಗುರ್ತಿಸಲಾಯಿತು. ಸದ್ರಿ ದಾಖಲೆಯು ಜಿಪಿಎ ದಾಖಲೆಯಾಗಿರುತ್ತದೆ. ಸಾಕ್ಷಿ ಗುರ್ತಿಸಿದ ಭಾಗವು ಸದ್ರಿ ದಾಖಲೆಯ 4 ನೇ ಪುಟ ಆಗಿರುತ್ತದೆ. ಸದ್ರಿ 4 ನೇ ಪುಟವನ್ನು ನಿಡಿ.1 ಎಂದು ಗುರ್ತಿಸಲಾಯಿತು. ಸಾಕ್ಷಿ ಗುರ್ತಿಸಿದ ನಿಡಿ.1 ರಲ್ಲಿ 6 ಸಹಿಗಳನ್ನು ಒಟ್ಟಾಗಿ ನಿಡಿ.1(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ಗುರ್ತಿಸಿಕೊಂಡ 6 ಫೋಟೋಗಳನ್ನು ಒಟ್ಟಾಗಿ ನಿಡಿ.1(ಬಿ) ಎಂದು ಗುರ್ತಿಸಲಾಯಿತು. ನಿಡಿ.1 ಕ್ಕೆ ನಾವು ಸಹಿ ಹಾಕಿರುವುದು ಅದರಲ್ಲಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಹಾಕಿರುವುದು ಎಂದರೆ ಸರಿಯಲ್ಲ. ನಾವು ಸಹಿಗಳನ್ನು ನೋಟರಿ ಮೋಹನ್ ದಾಸ್ ಶೆಟ್ಟಿಯವರ ಸಮ್ಮುಖದಲ್ಲಿ ಹಾಕಿರುವುದು ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಸಹಿಗಳನ್ನು ಶ್ರೀಮತಿ ಹಿಲ್ಡಾ ವಕೀಲರು ಗುರ್ತಿಸಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಅವರು ಯಾರು ಎಂದು ಗೊತ್ತಿಲ್ಲ.

ನನಗೆ ನನ್ನ ತಾಯಿಯ ಮೇಲೆ ಯಾವುದೇ ದ್ವೇಷ ಇಲ್ಲ. ನನ್ನ ತಾಯಿಯವರು ನಮಗೆ ನಿಡಿ.1 ರ ಜಿಪಿಎ ದಾಖಲೆ ಬಗ್ಗೆ ವಿಷಯವನ್ನು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ದಾಖಲೆಯನ್ನು ನಮ್ಮ ಎಲ್ಲರ ಒಪ್ಪಿಗೆಯ ಮೇರೆಗೆ ನಮ್ಮ ತಾಯಿಯ ಹೆಸರಿಗೆ ನಾವು ಬರೆದುಕೊಟ್ಟಿರುವುದು ಎಂದರೆ ಸರಿಯಲ್ಲ. ನನ್ನ ಬಗ್ಗೆ 4 ನೇ ಪ್ರತಿವಾದಿಯು ಕಾಪು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ ಎಂದರೆ ಸರಿ. ನಾನು 4 ನೇ ಪ್ರತಿವಾದಿಗೆ ಮುನ್ನ ಮತ್ತು ಚಂದ್ರ ಪೆರ್ಲ ಎಂದು ಹೇಳುವವರ ಮುಖಾಂತರ ಜೀವ ಬೆದರಿಕೆ ಹಾಕಿದ ಕಾರಣ ನನ್ನ ವಿರುದ್ದ ದೂರನ್ನು ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ನಾನು ಆ ರೀತಿ ಜೀವ ಬೆದರಿಕೆ ಹಾಕಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ಪೋಲೀಸ್ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಸಹ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಇನ್ನು ಮುಂದೆ 4 ನೇ ಪ್ರತಿವಾದಿಗೆ ಫೋನ್ ಮಾಡುವುದಿಲ್ಲ ಎಂದು ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಸದ್ರಿ ದಾಖಲೆಯನ್ನು ತೋರಿಸಿದ್ದು ಸಾಕ್ಷಿ ಅದನ್ನು ಅಲ್ಲಗೆಳೆದಿಲ್ಲ, ಆದ ಕಾರಣ ಅದನ್ನು ನಿಡಿ.2 ಎಂದು ಗುರ್ತಿಸಲಾಯಿತು. ಹಾಗೆಯೇ ನನ್ನ ಅಣ್ಣಂದಿರು ಸಹ ಪೋಲೀಸರ ಸಮಕ್ಷಮ ಹೇಳಿಕೆ ನೀಡಿದ್ದಾರೆ ಎಂದರೆ ಸರಿ, ಸಾಕ್ಷಿ ಒಪ್ಪಿಕೊಂಡ ಕಾರಣ ಸದ್ರಿ ಹೇಳಿಕೆಯನ್ನು ನಿಡಿ.3 ಎಂದು ಗುರ್ತಿಸಲಾಯಿತು. ವ್ಯಾಜ್ಯದ ಆಸ್ತಿಯ ಸ್ವಾಧೀನತೆ ನನ್ನ ಅಮ್ಮನ ಸಹೋದರ ಮತ್ತು ಸಹೋದರಿಯರ ಕೈನಲ್ಲಿ ಇದೆ ಆದ್ದರಿಂದ ಅವರನ್ನು ಎಬ್ಬಿಸಲು ನಾನು ಜೀವ ಬೆದರಿಕೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೋಸ್ಕರ 4 ನೇ ಪ್ರತಿವಾದಿ ಪೋಲೀಸ್ ಠಾಣೆಗೆ ಹೋಗಿ ರಕ್ಷಣೆ ಪಡೆದದ್ದು ಎಂದರೆ ಸಾಕ್ಷಿಯು ನಾನು ಕೇವಲ ಫೋನ್ ಮಾಡಿಸಿ ಜಾಗವನ್ನು

ಬಿಟ್ಟುಕೊಡಬೇಕು ಎಂದು ಕೇಳಿದ್ದು, ಅದು ಮಾನವೀಯತೆಯಿಂದ ಮಾತನಾಡಿದ್ದು, ನಾನು ಜೀವ ಬೆದರಿಕೆ ಹಾಕಿಲ್ಲ ಎಂದು ನುಡಿಯುತ್ತಾರೆ.

ನಿಡಿ.1 ರ ಆಧಾರದ ಮೇಲೆ ನನ್ನ ತಾಯಿ ತಮ್ಮ ಹೆಸರಿಗೆ ಬಿಡುಗಡೆ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಬಿಡುಗಡೆ ಪತ್ರ ಮಾಡಿಕೊಂಡಿಲ್ಲ ಎಂದು ನುಡಿಯತ್ತಾರೆ. ವಕೀಲರಿಗೆ ಈ ಕೇಸ್ ನ ಬಗ್ಗೆ ಮಾಹಿತಿಯನ್ನು ಕೊಟ್ಟದ್ದು ನಾನೇ. ನಮ್ಮ ದಾವಾ ಪತ್ರದಲ್ಲಿ ನನ್ನ ತಾಯಿಯ ಹೆಸರಿಗೆ ಆಗಿರುವ ಬಿಡುಗಡೆ ಪತ್ರದ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲೂ ಸಹ ಅದರ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿಯಲ್ಲ.

ನನ್ನ ಮಾಹಿತಿಯ ಪ್ರಕಾರ ವಕೀಲರು ವಾದಪತ್ರ ಮತ್ತು ಪ್ರಮಾಣ ಪತ್ರವನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಕೊಟ್ಟ ಮಾಹಿತಿಯನ್ನು ಮಾತ್ರ ಬರೆದಿದ್ದಾರೆ ಬೇರೇನೂ ಬರೆದಿಲ್ಲ.

ಈ ವ್ಯಾಜ್ಯದ ಆಸ್ತಿಗೆ ಎಲ್ಲು ಸುವರ್ಣ ಡಿಕ್ಲರೇಷನ್ ಕೊಡುವ ಮೊದಲು ಸದ್ರಿ ಆಸ್ತಿಗಳನ್ನು ನರ್ಸಿ ಮತ್ತು ಅವರ ಮಕ್ಕಳಿಗೆ ಎಲ್ಲು ಸುವರ್ಣ ರವರು ವಿಲ್ ನಾಮೆ ಬರೆದ ವಿಚಾರ ನಿಮಗೆ ತಿಳಿದಿದೆಯಾ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ವಿಲ್ ನಾಮೆ ಮಾಡಿಲ್ಲ. ಎಲ್ಲು ಸುವರ್ಣರವರು ಹಿಂದೆಯೇ ನರ್ಸಿ ಮತ್ತು ಅವರ ಮಕ್ಕಳಿಗೆ ವಿಲ್ ನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದರ ಪ್ರಕಾರ ಸ್ವಾಧೀನತೆಯನ್ನು ಸಹ ಅವರ ಹೆಸರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದರ ಆಧಾರದ ಮೇಲೆ ಈ ವ್ಯಾಜ್ಯದ ಆಸ್ತಿಯ ಸ್ವಾಧೀನತೆ ನರ್ಸಿ ಮತ್ತು ಅವರ ಮಕ್ಕಳಲ್ಲಿ ಬಿಟ್ಟರೆ ಬೇರೆ ಯಾರ ಬಳಿಯೂ ಇಲ್ಲ ಎಂದರೆ ಸರಿಯಲ್ಲ. ಎಲ್ಲು ಸುವರ್ಣ ರವರಿಗೆ ಬಡಾ ಎರ್ಮಾಳ್ ನ ಕೈಪುಂಜಾಲ್ ನಲ್ಲಿ ಡಿಕ್ಲರೇಷನ್ ಆಸ್ತಿ ಸಿಕ್ಕಿದೆ ಎಂದರೆ ಸರಿಯಲ್ಲ. ಆ ಆಸ್ತಿಯ ಅನುಭವ ಮತ್ತು ಸ್ವಾಧೀನತೆಯ ಹಕ್ಕು ಮಾತ್ರ ಇರುವುದು ವ್ಯಾಜ್ಯದ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವ್ಯಾಜ್ಯದ ಆಸ್ತಿಯನ್ನು ಒಳಗೆ ಹಾಕಿಕೊಳ್ಳುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ